# ಎನ್‌ಐಟಿಕೆ- ಜವಳಿ ಸಚಿವಾಲಯ ಒಪ್ಪಂದ

■ **ವಿಕ ಸುದ್ದಿಲೋಕ** ಮಂಗಳೂರು

ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕ (ಎನ್‌ಐಟಿಕೆ ) ಮತ್ತು ಭಾರತ ಸರಕಾರದ ಜವಳಿ ಸಚಿವಾಲಯದ ರಾಷ್ಟ್ರೀಯ ಸೆಣಬಿನ ಮಂಡಳಿಯೊಂದಿಗೆ ಸೆಣಬಿನಿಂದ ಜಿಯೋಸೆಲ್ ಉತ್ಪನ್ನಗಳನ್ನು ತಯಾರಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಮತ್ತು ಅವುಗಳನ್ನು ನಾನಾ ಎಂಜಿನಿಯರಿಂಗ್ ಅನ್ವಯಿಕೆಗಳಿಗೆ ಪ್ರಮಾಣೀಕರಿಸಲು ತಿಳಿವಳಿಕಾ ಒಡಂಬಡಿಕೆಗೆ ಸಹಿ ಹಾಕಿದೆ.

ಮಂಡಳಿಯು ರಾಷ್ಟ್ರೀಯ ಪ್ರಾಮುಖ್ಯತೆಯ ಪ್ರಮುಖ ತಾಂತ್ರಿಕ ಸಂಸ್ಥೆಗಳಲ್ಲಿ ಒಂದಾದ ಎನ್ ಐಟಿಕೆಯೊಂದಿಗೆ ಸೆಣಬಿನಿಂದ ಜೂಟ್ ಜಿಯೋಸೆಲ್ಸ್ ಎಂಬ ಹೊಸ ಉತ್ಪನ್ನದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಕೈಜೋಡಿಸಿದೆ.

ಹೊಸ ಉತ್ಪನ್ನದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಎನ್‌ಐಟಿಕೆಗೆ 48 ಲಕ್ಷ ರೂ.ಗಳ ಸಂಶೋಧನಾ ಸಹಾಯಧನ ಲಭ್ಯವಾಗಲಿದ್ದು, ಯೋಜನೆಯ ಪ್ರಧಾನ ತನಿಖಾಧಿಕಾರಿಯಾಗಿ ಡಾ. ಶ್ರೀವಲ್ಸ ಕೊಲತಾಯರ್, ಸಹ- ಪಿಐಗಳಾಗಿ ಡಾ.ರವಿರಾಜ್ ಎಚ್.ಎಂ ಮತ್ತು ಡಾ.ಸೋಮಶೇಖರ ರಾವ್ ಟಿ ಮತ್ತು ಎಸ್‌ಟಿಪಿ ಪಿಎಂಜಿಎಸ್ ವೈ ಸಲಹೆಗಾರರಾಗಿ ಪ್ರೊ.ಎ.ಯು. ರವಿಶಂಕರ್ ಅವರನ್ನು ನೇಮಿಸಲಾಗಿದೆ.

ಕೆಎಸ್ಸಿಎಸ್ಟಿಇ-ಸೆಂಟರ್ ಫಾರ್ ವಾಟರ್ ರಿಸೋರ್ಸ್ ಡೆವಲಪ್ಮೆಂಟ್ ಆ್ಯಂಡ್ ಮ್ಯಾನೇಜ್ಮೆಂಟ್ (ಸಿಡಬ್ಲ್ಯುಆರ್‌ಡಿಎಂ) ಮತ್ತು ಕೇರಳ ಹೈವೇ ರಿಸರ್ಚ್ ಇನ್ಸ್ಟಿಟ್ಯೂಟ್ ಸಂಸ್ಥೆಗಳು ಈ ಯೋಜನೆಗಾಗಿ ಸಹಯೋಗ ಸಂಸ್ಥೆಗಳಾಗಿದ್ದು, ಬಿರ್ಲಾ ಸೆಣಬಿನ ಗಿರಣಿ (ಬಿರ್ಲಾ ಕಾರ್ಪೊರೇಷನ್ ಲಿಮಿಟೆಡ್‌ನ ಘಟಕ) ಕೈಗಾರಿಕಾ ಉದ್ಯಮ ಪಾಲುದಾರರಾಗಿದ್ದಾರೆ.

Vijaya Karnataka, Date:25/03/23, p.no-01